





# ಮರೆಯಾಗುತ್ತಿರುವ ಬೇಡ್ಕೇ ದಿನ

ನಮ್ಮಲ್ಲಿ ಹರಕೆ, ಹಬ್ಬ, ಜಾತ್ರೆ ಮುಂತಾದ ವಿಷಯಗಳಲ್ಲಿ ರೂಢಿ ಸಂಪ್ರದಾಯಗಳನ್ನು ಇಂದಿಗೂ ನೋಡುತ್ತೇವೆ. ಬಹಳಷ್ಟು ರೂಢಿ ಸಂಪ್ರದಾಯಗಳು ಮರೆಯಾದರೂ ಕೆಲವನ್ನು ಅಲ್ಲಲ್ಲಿ ಕಾಣುತ್ತೇವೆ. ಹೀಗೆ ಪಾಲಿಸಿಕೊಂಡು ಬಂದ ರೂಢಿ ಸಂಪ್ರದಾಯಗಳು ಕಾನೂನಿನಷ್ಟೇ ಶಕ್ತಿಶಾಲಿ.

ಉತ್ತರ ಕನ್ನಡದ ಕರಾವಳಿ ತಾಲ್ಲೂಕುಗಳಲ್ಲಿ, ಅದರಲ್ಲೂ ವಿಶೇಷವಾಗಿ ಅಂಕೋಲಾದ ಗ್ರಾಮೀಣ ಪ್ರದೇಶಗಳಲ್ಲಿ ಸಂಕ್ರಾಂತಿಯ ಮಾರನೇ ದಿನ (ಕಿಂಕ್ರಾಂತಿ) ಒಂದು ವರ್ಗದ ಜನ 'ಬೇಡ್ಕೇ ದಿನ' ಆಚರಿಸುತ್ತಾರೆ. ಅವರು ತಮ್ಮ ಗ್ರಾಮದ ಸರಹದ್ದಿನ ಒಳಗೆ ಹಲಗೆ ವಾದ್ಯಗಳನ್ನು ಬಾರಿಸುತ್ತಾ, ಮನೆ ಮನೆಗೆ ತಿರುಗುತ್ತಾರೆ. ಅವರ ತಂಡದಲ್ಲಿ ಐದರಿಂದ ಐವತ್ತು ಜನರ ತನಕ ಇರುತ್ತಾರಲ್ಲದೆ, ಈ ಭಾಗದ ಪ್ರತಿ ಮನೆಗಳಿಗೂ ಹೋಗಿ ಗೌರವ ಕಾಣಿಕೆಯನ್ನು ಸಂಗ್ರಹಿಸುತ್ತಾರೆ. ಸಾಮಾನ್ಯವಾಗಿ ಪ್ರತಿ ಮನೆಯಲ್ಲೂ ತೆಂಗಿನಕಾಯಿ, ಹಣ, ದವಸಧಾನ್ಯ ಕೊಡುವುದು ಸಂಪ್ರದಾಯ.

ಗ್ರಾಮ ದೇವಿ ಶ್ರೀ ಶಾಂತಿಕಾ ಪರಮೇಶ್ವರಿಯ ಮಂದಿರದ ಎದುರು ನಿತ್ಯ ಸಂಜೆ ವೇಳೆ ಈ ಜನಾಂಗದವರು ವಾದ್ಯ ಬಾರಿಸಿ, ಗ್ರಾಮ ದೇವಿಯನ್ನು ಆರಾಧಿಸುತ್ತಾರೆ. ಈ ಪ್ರಕ್ರಿಯೆಗೆ ಅವರು ಯಾವುದೇ ಸಂಭಾವನೆಯನ್ನು ಸ್ವೀಕರಿಸುವುದಿಲ್ಲ. ಬದಲಿಗೆ ಸಂಕ್ರಾಂತಿಯ ಮಾರನೆ ದಿನವಾದ ಕಿಂಕ್ರಾಂತಿಯಂದು ಬೇಡ್ಕೇ ದಿನ ಆಚರಿಸಿ, ಸಂಗ್ರಹಿಸಿದ್ದನ್ನು ಸ್ವಂತಕ್ಕೆ ಬಳಸಿಕೊಳ್ಳುತ್ತಾರೆ. ಇಂದು ಕೆಲವು ಊರುಗಳಲ್ಲಿ ಈ ಆಚರಣೆ ಮರೆಯಾಗಿದ್ದು, ಕೆಲವು ಊರುಗಳಲ್ಲಿ ಇನ್ನೂ ಉಸಿರು ಹಿಡಿದುಕೊಂಡಿದೆ.

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ





# ಮನಸೆಳೆವ ನೀಲಿ ಕಂಗಳ ಹುಳ

ಬೆಳಿಗ್ಗೆ ಹೂ ಕೊಯ್ಯಲು ಕಣಗಲು ಗಿಡದ ಬಳಿ ಹೋದಾಗ, ಎಲೆ ತಿನ್ನುವುದರಲ್ಲಿ ನೀಲಿ ಕಂಗಳ ಹಸುರು ಹುಳ ಮಗ್ನವಾಗಿತ್ತು. ಇದರ ನೀಲಿ ಕಣ್ಣು ಸೆಳೆಯುವಂತಿತ್ತು. ಫೋಟೊ ತೆಗೆಯುವಾಗ ಕಣ್ಣು ಮುಚ್ಚುತ್ತಿತ್ತು. ಈ ಕೀಟದ ಮಾಹಿತಿಯ ಬೆನ್ನೇರಿದಾಗ ಇದೊಂದು ಬಗೆಯ ಕ್ಯಾಟರ್ ಪಿಲ್ಲರ್ ಎಂದು ಗೊತ್ತಾಯಿತು. ಇದು 'ಓಲಿಯಾಂಡರ್ ಹಾಕ್ ಮಾಥ್'. ಇದರ ವೈಜ್ಞಾನಿಕ ಹೆಸರು ಡ್ಯಾಫ್ನಿಸ್ ನೆರಿ (**Daphnis nerii**). ಜೀವನ ಚಕ್ರದಲ್ಲಿ ಇದರ ಮುಂದಿನ ರೂಪಾಂತರ 'ಹಾಕ್ ಮಾಥ್' ಎಂಬ ಹೆಸರಿನ ಒಂದು ಸುಂದರ ಬಣ್ಣದ ಚಿಟ್ಟೆ. ಈ ಪ್ರಕೃತಿಯ ರಹಸ್ಯಗಳು ಎಷ್ಟು ಅದ್ಭುತವಲ್ಲವೇ?

–ಎಚ್.ಎಸ್. ನವೀನ ಕುಮಾರ್, ಹೊಸದುರ್ಗ